## ಕಲ್ಪನೆ ಕಾವ್ಯ



# ಆಹಾ ಮಜ್ಜನ

ತಮ್ಮನ ಜಳಕವು ಬೀದಿಯ ಬದಿಯಲಿ
ಸುಮ್ಮನೆ ನೋಡುತ ಕುಳಿತಿಹಳಕ್ಕ
ಅಮ್ಮನ ಪ್ರೀತಿಯ ಕಂದನು ಪುಟ್ಟನು
ಒಮ್ಮೆಯೂ ಗದರದೆ ಕರೆವಳು ಪಕ್ಕ

ಸುರಿಯುತಲಿದ್ದಳು ಬಿಸಿಬಿಸಿ ನೀರನು
ಸ್ಫುರಿಸುತ ಒಲವಿನ ಧಾರೆಯ ಜೊತೆಗೆ
ಹರೆಯದ ಹುಡುಗಿಯ ಮನದಲಿ ಭಾವವು
ಗರಿಗೆದರುತ್ತಲಿ ಪುಟಿಯಿತು ಹೊರಗೆ

ಲಜ್ಜೆಯ ಗೊಡವೆಯು ಹುಡುಗನಿಗೆಲ್ಲಿದೆ
ಉಜ್ಜುತಲಿರುವಳು ಮೈಯನು ಸೊಗದಿ
ಗೆಜ್ಜೆಯ ದನಿಯನು ಆಲಿಸಿ ತೋಷದಿ
ಕಜ್ಜಲ ತಿಕ್ಕುತ ತೊಳೆವಳು ಚಣದಿ

ಹಚ್ಚನೆ ಹಸಿರಿನ ನಡುವಲಿ ಮಜ್ಜನ
ಹಚ್ಚುತ ಸಾಬಾಣದ ನೊರೆಯೊಡನೆ
ಮೆಚ್ಚಿನ ಹಾಡನು ಗುನುಗುತ ತಾಯಿಯು
ಬೆಚ್ಚಗಿನಂಗಿಯ ತೊಡಿಸಿಹಳು ತಾನೇ

ಸ್ನಾನದ ಸಂಭ್ರಮ ಸಡಗರ ವೀಕ್ಷಿಸಿ
ಸೋನೆಗೆ ಬುವಿಯನು ಮುತ್ತುವ ಬಯಕೆ
ಬಾನಲಿ ಮುಗಿಲಿನ ಓಟದ ಸ್ಪರ್ಧೆಯು
ಕಾನಕೆ ಕೇಳಿತು ಮಕ್ಕಳ ಕೇಕೆ

● **ಲತಾ ಆಚಾರ್ಯ ಬನಾರಿ**

# ಸ್ವರ್ಗ ಸುಖ

ನೆತ್ತಿಯ ಮೇಲೆ ಬಿಸಿಲಿದ್ದರೇನು?
ಅಮ್ಮನ ಅಕ್ಕರೆಯಲ್ಲಿ
ಮೀಯುತಿಹೆ ನಾನು

ಹಸಿರ ಸಿರಿಯೊಳಗಿನ
ಮುರುಕು ಜೋಪಡಿಯೇ
ನನ್ನ ಅರಮನೆ
ಮೋರಿ ಕೊಳವೆಯೇ
ಸಿಂಹಾಸನ!

ಕುದುರೆ ಕಾಲಾಳಿಲ್ಲ
ಚದುರಂಗ ದಳವಿಲ್ಲ
ಬೆಳ್ಗೊಡೆ ಬೀಸಣಿಕೆಯಿಲ್ಲ
ಹೊಗಳು ಭಟರಿಲ್ಲ

ಈ ನೆಲದ ದೊರೆ ನಾನು
ಠೀವಿಯಲಿ ಕೂತಿಹೆನು
ಈ ಜಳಕದ ಭಾಗ್ಯ
ಸವಿಯುತಿರುವೆನು

ನುಣುಪು ಮೈ ಒರೆಸಲು
ಅಮ್ಮನ ಸೆರಗಿದೆ
ಅಂಗಾಲಿನ ಗಾಯಕ್ಕೆ
ಅಕ್ಕನ ಕಾಳಜಿ ಇದೆ!

ಇನ್ನೇನು ಬೇಕು?
ಈ ಸ್ವರ್ಗ ಸುಖವೇ ಸಾಕು!

● **ಸುಧಾ ಜಯಪ್ರಕಾಶ ತಲವಾಟ**